| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 63 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 63 ] [ Total No. of Printed Pages : 24

**ಸಂಕೇತ ಸಂಖ್ಯೆ : 01-K** **ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K** **Subject : First Language — KANNADA**

ದಿನಾಂಕ : 01. 04. 2013 ] [ Date : 01. 04. 2013

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಪರಮಾವಧಿ ಅಂಕಗಳು : 125 ] [ Max. Marks : 125

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 14. | | 27. | | 40. | | 53. | |
| 2. | | 15. | | 28. | | 41. | | 54. | |
| 3. | | 16. | | 29. | | 42. | | 55. | |
| 4. | | 17. | | 30. | | 43. | | 56. | |
| 5. | | 18. | | 31. | | 44. | | 57. | |
| 6. | | 19. | | 32. | | 45. | | 58. | |
| 7. | | 20. | | 33. | | 46. | | 59. | |
| 8. | | 21. | | 34. | | 47. | | 60. | |
| 9. | | 22. | | 35. | | 48. | | 61. | |
| 10. | | 23. | | 36. | | 49. | | 62. | |
| 11. | | 24. | | 37. | | 50. | | 63. | |
| 12. | | 25. | | 38. | | 51. | | × | |
| 13. | | 26. | | 39. | | 52. | | × | |
| | | | | | | | | ***Total Marks*** | |
| **Total Marks in words** | | | | | | | | **Grand Total** | |

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 63 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ :

15 × 1 = 15

1. ಫ, ಝ, ಢ, ಧ, ಭ ಅಕ್ಷರಗಳನ್ನು ಹೀಗೆಂದು ಕರೆಯುತ್ತೇವೆ ;

(ಎ) ದೀರ್ಘಸ್ವರಾಕ್ಷರಗಳು (ಬಿ) ಅಲ್ಪಪ್ರಾಣಾಕ್ಷರಗಳು

(ಸಿ) ಮಹಾಪ್ರಾಣಾಕ್ಷರಗಳು (ಡಿ) ಅನುನಾಸಿಕಾಕ್ಷರಗಳು

*ಉತ್ತರ :* ____________________

2. 'ವಿದ್ವಾಂಸ' ಪದವು ಈ ನಾಮಪದಕ್ಕೆ ಸೇರಿದೆ ;

(ಎ) ರೂಢನಾಮ (ಬಿ) ಅನ್ವರ್ಥಕನಾಮ

(ಸಿ) ಅಂಕಿತನಾಮ (ಡಿ) ಭಾವನಾಮ

*ಉತ್ತರ :* ____________________

3. 'ತಾವು' ಎಂಬುದು ಸರ್ವನಾಮದ ಈ ವಿಭಾಗಕ್ಕೆ ಸೇರಿದೆ ;

(ಎ) ಪ್ರಶ್ನಾರ್ಥಕ (ಬಿ) ನಿರ್ದೇಶನಾತ್ಮಕ

(ಸಿ) ಪುರುಷಾರ್ಥಕ (ಡಿ) ಆತ್ಮಾರ್ಥಕ

ಉತ್ತರ : ______

4. ''ನನ್ನ ಬಳಿ ಅವನ ಆಟ ನಡೆಯದು '' ; ವಾಕ್ಯದಲ್ಲಿ ಗೆರೆ ಎಳೆದ ಪದದ ಸಂಭಾವನಾರ್ಥಕ ರೂಪ ;

(ಎ) ನಡೆದೀತು (ಬಿ) ನಡೆಯಲಿ

(ಸಿ) ನಡೆದಾನು (ಡಿ) ನಡೆಯಲಿಲ್ಲ

ಉತ್ತರ : ______

5. ಹಳಗನ್ನಡದ ಪಂಚಮಿ ವಿಭಕ್ತಿ ಪ್ರತ್ಯಯ :

(ಎ) ಒಳ್ (ಬಿ) ಅತ್ತಣಿಂ

(ಸಿ) ಇಂದಂ (ಡಿ) ಅ

ಉತ್ತರ : ______

6. 'ಜಶ್ತ್ವ ಸಂಧಿಗೆ ಉದಾಹರಣೆಯಿದು ;

(ಎ) ಮನಶ್ಶಾಂತಿ (ಬಿ) ವಾಗ್ದೇವಿ

(ಸಿ) ಸಿರಿಗನ್ನಡ (ಡಿ) ದಿಙ್ಮೂಡ

ಉತ್ತರ : ______

7. 'ಕೈಯಾಡಿಸು' ಪದವು ಈ ಸಂಧಿಗೆ ಉದಾಹರಣೆ ;

(ಎ) ಲೋಪ (ಬಿ) ಆದೇಶ

(ಸಿ) ಆಗಮ (ಡಿ) ಪ್ರಕೃತಿಭಾವ

ಉತ್ತರ : ______

8. 'ಸಂಜ್ಞಾ' ಪದದ ತದ್ಭವ ರೂಪ ;

(ಎ) ಸೊನ್ನೆ (ಬಿ) ಸನ್ನೆ

(ಸಿ) ಸಂದ್ಯಾ (ಡಿ) ಶೂನ್ಯ

ಉತ್ತರ : ______________________

9. 'ತಟ್ಟನೆ' ಪದವು ಈ ಅವ್ಯಯಕ್ಕೆ ಉದಾಹರಣೆ ;

(ಎ) ಭಾವಸೂಚಕಾವ್ಯಯ (ಬಿ) ಸಂಬಂಧಾರ್ಥಕಾವ್ಯಯ

(ಸಿ) ಸಾಮಾನ್ಯಾವ್ಯಯ (ಡಿ) ಅನುಕರಣಾವ್ಯಯ

ಉತ್ತರ : ______________________

10. 'ಪ್ರಜಾಮಾತೆ' ಪದವು ಈ ಸಮಾಸಕ್ಕೆ ಉದಾಹರಣೆ ;

(ಎ) ಕ್ರಿಯಾಸಮಾಸ (ಬಿ) ಅಂಶಿಸಮಾಸ

(ಸಿ) ಕರ್ಮಧಾರೆಯ (ಡಿ) ತತ್ಪುರುಷ

ಉತ್ತರ : ______________________

11. 'ಹೆಚ್ಚಿನ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ ;

(ಎ) ಆವರಣ (ಬಿ) ಉದ್ಧರಣ

(ಸಿ) ವಾಕ್ಯವೇಷ್ಟನ (ಡಿ) ವಿವರಣಾತ್ಮಕ

ಉತ್ತರ : ______________________

12. ''ಬರಗಾಲದಲ್ಲಿ ಕಾವೇರಿ ನದಿಯಿಂದ ನೀರು ಬಿಟ್ಟುದನ್ನು ನೋಡಿ ಜನರು ಸಂತಸದಿಂದ ಬೇಸಾಯ ಮಾಡಿದರು'' ವಾಕ್ಯವು ;

(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ವಿಶೇಷ ವಾಕ್ಯ

ಉತ್ತರ : ______________________

13. 'ಪತಂಗ' ಈ ಪದದ ಅರ್ಥ ;

(ಎ) ಚಿಟ್ಟೆ (ಬಿ) ಚಂದ್ರ

(ಸಿ) ಸೂರ್ಯ (ಡಿ) ಪಾತರಗಿತ್ತಿ

*ಉತ್ತರ :* ______________________

14. 'ಕೃದಂತ ಭಾವನಾಮ'ಕ್ಕೆ ಉದಾಹರಣೆ ಇದು ;

(ಎ) ನಡೆಯಲು (ಬಿ) ನಡೆವಳಿಕೆ

(ಸಿ) ನಡೆಯುವ (ಡಿ) ಚಲುವಿಕೆ

*ಉತ್ತರ :* ______________________

15. 'ಇರ್ಕುಂ' ಪದದ ಹೊಸಗನ್ನಡ ರೂಪ ;

(ಎ) ಇದ್ದಿತು (ಬಿ) ಇದ್ದರೂ

(ಸಿ) ಇರುವ (ಡಿ) ಇರುವೆವು

*ಉತ್ತರ :* ______________________

16. ಈ ಕೆಳಗಿನ **'ಅ'** ಪಟ್ಟಿಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು **'ಬ'** ಪಟ್ಟಿಯಿಂದ ಕ್ರಮಾಕ್ಷರದೊಂದಿಗೆ ಆರಿಸಿ, ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿ ಬರೆಯಿರಿ : 5 × 1 = 5

| *ಅ* | | *ಬ* | |
|---|---|---|---|
| i) | ನುಡಿಗಟ್ಟು | ಅ) | ನಿನಗೋಸ್ಕರ |
| ii) | ಜೋಡುನುಡಿ | ಆ) | ಮನವೊಲಿಸು |
| iii) | ದ್ವಿರುಕ್ತಿ | ಇ) | ಜಂಗಾಲು |
| iv) | ಪೋರ್ಚುಗೀಸ್ ಪದ | ಈ) | ಗುಳುಗುಳು |
| v) | ತದ್ಧಿತಾಂತಾವ್ಯಯ ಪದ | ಉ) | ಇನಾಮದಾರ |
| | | ಊ) | ತುತ್ತತುದಿ |
| | | ಋ) | ಏಳು-ಬೀಳು |
| | | ೠ) | ದೊಡ್ಡತನ |

*ಉತ್ತರ :* i) ______________________

ii) ______________________

iii) ______________________

iv) ______________________

v) ______________________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ತಾನೂ ಕಡಿಸಿಕೊಂಡು ನನಗೆ ............................................................................ ಮಾಡಿದ್ದಳು.

18. ಏಳರಾಟದ ಶನಿ ಹೊಡೆದು ................................................................................ .

19. ಮೈಸೂರಿನಲ್ಲಿಯೂ ಅದೇ ರೀತಿ .......................................................................... ದಿಂದಲೇ ನನ್ನ ಸಕಲ ಖರ್ಚು ವೆಚ್ಚಗಳನ್ನು ಸರಿದೂಗಿಸುತ್ತಿದ್ದೆ.

20. ಅಳುವ ಕಂದನ ತುಟಿಯು ........................................................................... ಕುಡಿಯಂಗ.

21. ಧನುಶರಮೆತ್ತ ನಿನ್ನ ತಪಮೆತ್ತ ವಿಚಿತ್ರ ಮಿದಲ್ತೆ ............................................................ .

ಈ ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ : 10 × 1 = 10

22. ಮನುಷ್ಯನಿಗೆ ಲೆಕ್ಕವಿಡುವ ಅವಶ್ಯಕತೆ ಯಾವಾಗ ಉಂಟಾಯಿತು ?

23. ಸಿದ್ದಪ್ಪನ ಕಣ್ಣಿನಿಂದ ನೀರು ಜಾರಿ ಎಸರಿನೊಳಕ್ಕೆ ಬಿದ್ದದ್ದು ಏಕೆ ?

24. ವೆಂಕಣ್ಣ ಮೇಷ್ಟ್ರು ಯಾವುದಕ್ಕಾಗಿ ಹೆಚ್ಚು ಸಂಕಟಪಡುತ್ತಿದ್ದರು ?

25. ಅಂದು ಮಹಾರಾಜ ಕಾಲೇಜಿನ ಅಧ್ಯಾಪಕರು ಹೇಗೆ ಕಾರ್ಯ ನಿರ್ವಹಿಸುತ್ತಿದ್ದರು ?

26. ಆಪರೇಷನ್ ಮೇಘನಾದದ ಉದ್ದೇಶವೇನು ?

27. ಶ್ರೀಭಾರತಿ ಭಾಷೆಗಳ ಕಾಂತಿಯಲ್ಲಿ ಹೇಗೆ ತೋರುತ್ತಿದ್ದಾಳೆ ?

28. ದೊರೆಯಾದವನ ಕರ್ತವ್ಯವೇನು ?

29. ಗೋಪಾಲ ವಿಠಲನ ಅಂಘ್ರಿ ಪಲ್ಲವವನು ಯಾರು ಕಾಣಲು ಸಾಧ್ಯವಿಲ್ಲ ?

30. ಜನಪದರ ಪ್ರಕಾರ ಲೋಕದಲ್ಲಿ ಬೆಲೆಯಾದದ್ದು ಯಾವುದು ?

31. ಅರ್ಜುನನು ಶಬರನ ಕೆಲಸ ಯಾವುದೆಂದು ಹೇಳುತ್ತಾನೆ ?

ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $15 \times 2 = 30$

32. ಅಳು-ನಗು ಎರಡೂ ಪರಸ್ಪರ ವಿರುದ್ಧವಾದುವು ಹೇಗೆ ?

33. ಸಿದ್ದೇಗೌಡರಿಗೆ ಮಗನ ಬಗೆಗೆ ಕೋಪ ಬಂದ ಸಂದರ್ಭವನ್ನು ಕುರಿತು ಬರೆಯಿರಿ.

34. ಶಾಲೆಯ ನೋಟೀಸ್ ಬೋರ್ಡಿನ ಮೇಲೆ ಯಾವ ಯಾವ ಸೂಚನೆಗಳನ್ನು ಬರೆಯಲಾಗಿತ್ತು ?

35. ಕಾಲೇಜಿಗೆ ಬಿಡುವಿದ್ದಾಗ ಮಂಜಪ್ಪನವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳಾವುವು ?

36. ವ್ಯಕ್ತಿತ್ವ ಮತ್ತು ನಡತೆಯನ್ನು ಹೇಗೆ ಸಿದ್ಧಿಸಿಕೊಳ್ಳಬಹುದು ?

37. ರಕ್ಷಣ ಪಡೆಗಳು ರಾಷ್ಟ್ರೀಯ ಭಾವೈಕ್ಯತೆಯ ಸಂಕೇತ ಹೇಗೆ ?

38. ಪುರಾಣ ಕೂಪವನ್ನು ಕುರಿತು ನಿಮ್ಮ ಮಾತುಗಳಲ್ಲಿ ಉತ್ತರ ಬರೆಯಿರಿ.

39. ಭಾರತೀಯ ನೌಕಾಪಡೆಯ ಬಗ್ಗೆ ಪುರಾಣಗಳಲ್ಲಿ ಯಾವ ಉಲ್ಲೇಖಗಳು ದೊರೆಯುತ್ತವೆ ?

40. ರಕ್ತ ಮೀರಿದ ಸಂಬಂಧದ ಹಿನ್ನೆಲೆಯನ್ನು ಕವಿ ಹೇಗೆ ವರ್ಣಿಸಿದ್ದಾರೆ ?

41. ಸತಿ, ಸ್ನೇಹ, ಬಯಕೆ, ಭಾಗ್ಯದ ವಿಚಾರದಲ್ಲಿ ಕನಕದಾಸರ ಅಭಿಪ್ರಾಯವೇನು ?

42. ಜನಪದರು ತಾಯಿಯ ಮಹತ್ವವನ್ನು ಕುರಿತು ಏನೆಂದು ಹೇಳಿದ್ದಾರೆ ?

43. ಯಾರಲ್ಲಿ ಶೌರ್ಯವನ್ನು ತೋರಿಸು ಎಂದು ಅರ್ಜುನ ಶಬರನಿಗೆ ಹೇಳಿದ ?

44. ಮಹಾದೇವಿಯಕ್ಕನು ಪ್ರಕೃತಿಯಲ್ಲಿ ಏಕತಾಭಾವವಿದೆ ಎಂದು ನಿರೂಪಿಸಲು ಹೇಳಿರುವ ನಿದರ್ಶನಗಳಾವುವು ?

45. ಮುಕ್ತಾಯಕನು ಅಜಗಣ್ಣನ ಗುಪ್ತ ಸಾಧನೆಯನ್ನು ಹೇಗೆ ವಿವರಿಸುತ್ತಾಳೆ ?

46. ಯಾರೇ ತಡೆದರೂ ಪಂಪನ ಮನಸ್ಸು ಬನವಾಸಿಯನ್ನು ನೆನೆಯಲು ಕಾರಣವೇನು ?

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ : $5 \times 3 = 15$

47. ''ಸಿಗುರು ತೆಗೆದ ಕಬ್ಬಿನಂತೆ ಉಷ್ಣ ಅಳಿದ ಹಾಲಿನಂತೆ''

48. ''ಮನಸ್ಸು ರೋಗವನ್ನು ಸೃಷ್ಟಿಸಬಲ್ಲುದು, ಗುಣಪಡಿಸಲೂ ಬಲ್ಲುದು !''

49. ‘‘ಗಾವಸಿಂಗಮೆಂದುದು ನಿನ್ನಂ’’

50. ‘‘ಬರಿಗನಸುಗಾವರವ ಮಾಣು’’

51. ''ವೇದ ಕುರಾನ ಬೈಬಲ್ ಸಿಂಧು ನೀ''

ಈ ಕವಿಗಳ / ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ : $2 \times 3 = 6$

52. ಎಂ.ಎಸ್. ಸುಂಕಾಪುರ

53. ನೃಪತುಂಗ

54. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3

ಜಾಗದ ಬೋಗದಕ್ಕರದ ಗೇಯದ ಗೊಟ್ಟಿಯಲಂಪಿ ನಿಂಪುಗಳ್ಗಾಗರ

55. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ : 1 × 3 = 3

''ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು.

56. ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಚಿಂತೆಯೇ ಮುಪ್ಪು ಸಂತೋಷವೇ ಯೌವನ

— ಅತಿ ಆಸೆ ಗತಿಗೇಡು

— ಮಾತೇ ಮುತ್ತು ಮಾತೇ ಮೃತ್ಯು

57. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಪರರ ಕಣ್ಣ______________________________

______________________________

______________________________

______________________________ದೀಪ್ತಿಯಲಿ ಬೆಳೆ !

ಅಥವಾ

ಆ ರವಮಂ ______________________________

______________________________

______________________________

______________________________ಬೆಮರ್ತನುರುಗಪತಾಕಂ.

58. ಈ ಕೆಳಗಿನ ಪದ್ಯಭಾಗದ ಸಾರಾಂಶವನ್ನು ಬರೆಯಿರಿ : 1 × 4 = 4

ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ।
ಕೆಲವಂ ಮಾಳ್ಪವರಿಂದ ಕಂಡು ಕೆಲವಂ ಸುಜ್ಞಾನದಿಂ ನೋಡುತಂ॥
ಕೆಲವಂ ಸಜ್ಜನ ಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ।
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀಚನ್ನಸೋಮೇಶ್ವರಾ॥

59. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ಅಂಗುಲಿಮಾಲನ ಮನಸ್ಸು ಪರಿವರ್ತನೆಗೊಂಡ ಬಗೆಯನ್ನು ವಿವರಿಸಿ.
— ಅಮಾತ್ಯರಾಕ್ಷಸನು ನಿಶಸ್ತ್ರನಾಗಿ ಶೂಲಸ್ಥಾನಕ್ಕೆ ಹೋಗುವಂತಾಗಲು ಪಶುಲೋಮ ಮಾಡಿದ ಉಪಾಯವೇನು ವಿವರಿಸಿ.
— ತಿಪ್ಪೇನಹಳ್ಳಿ ಶಾಲೆಗೆ ಪರಂಗಿ ಟೋಪಿ ಸಾಹೇಬರು ಭೇಟಿ ನೀಡಿದ ಪ್ರಸಂಗವನ್ನು ವಿವರಿಸಿ.

60.

61. ಈ ಕೆಳಗಿನ ಪ್ರಶ್ನೆಗಳಲ್ಲಿ **ಒಂದನ್ನು** ಕುರಿತು ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಯಕ್ಷ ಮತ್ತು ಧರ್ಮಜನ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿ ಬರೆಯಿರಿ.

— ಭರತ ಭೂಮಿಯ ವರಪುತ್ರನಾಗ ಬಯಸುವವನು ಹೇಗೆ ಬೆಳೆದು ಬಾಳಬೇಕು ?

62. — ನಿಮ್ಮನ್ನು ಬೆಳಗಾವಿಯ ಸಚ್ಚಿದಾನಂದ / ಸೌಮ್ಯಶ್ರೀ ಎಂದು ಭಾವಿಸಿಕೊಂಡು ಕಿತ್ತೂರಿನಲ್ಲಿ ನಡೆಯುವ 'ಅಖಿಲ ಕರ್ನಾಟಕ ಮಕ್ಕಳ ಸಾಹಿತ್ಯ ಸಮ್ಮೇಳನಕ್ಕೆ' ಆಹ್ವಾನಿಸಿ, ಬೆಂಗಳೂರಿನ ಜಯನಗರದಲ್ಲಿ ವಾಸವಾಗಿರುವ ನಿಮ್ಮ ಅಣ್ಣ ಮಹಾಂತೇಶನಿಗೆ ಪತ್ರವೊಂದನ್ನು ಬರೆಯಿರಿ. $1 \times 5 = 5$

ಅಥವಾ

— ನಿಮ್ಮನ್ನು ಮೈಸೂರಿನ ಕುಮುದಿನಿ / ಕುಮಾರಸ್ವಾಮಿ ಎಂದು ಭಾವಿಸಿಕೊಂಡು ಬೆಂಗಳೂರಿನ ನೆಹರು ತಾರಾಲಯದ ವೀಕ್ಷಣೆಗೆ ಸಮಯಾವಕಾಶ ಮತ್ತು ಅನುಮತಿ ಕೋರಿ ತಾರಾಲಯದ ನಿರ್ದೇಶಕರಿಗೆ ಪತ್ರವೊಂದನ್ನು ಬರೆಯಿರಿ.

63. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದಕ್ಕೆ** ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಗ್ರಂಥಾಲಯದ ಮಹತ್ವ

— ಜನಜಾಗೃತಿ ಮೂಡಿಸುವಲ್ಲಿ ಸಮೂಹ ಮಾಧ್ಯಮಗಳ ಪಾತ್ರ

— ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಭಾವೈಕ್ಯತೆಯ ಅವಶ್ಯಕತೆ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – **560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಏಪ್ರಿಲ್, **2013**

**S.S.L.C. EXAMINATION, APRIL, 2013**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 01. 04. 2013 ಸಂಕೇತ ಸಂಖ್ಯೆ : **01-K**

Date : 01. 04. 2013 **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ

## Subject : FIRST LANGUAGE — KANNADA

[ ಪರಮಾವಧಿ ಅಂಕಗಳು : 125

[ Max. Marks : 125

| ಪ್ರಶ್ನೆ ಸಂಖ್ಯೆ | ಉತ್ತರದ ಕ್ರಮಾಕ್ಷರ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|---|
| | | ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ. | 15 × 1 = 15 |
| 1. | (ಸಿ) | ಮಹಾಪ್ರಾಣಾಕ್ಷರಗಳು | |
| 2. | (ಬಿ) | ಅನ್ವರ್ಥಕನಾಮ | |
| 3. | (ಡಿ) | ಆತ್ಮಾರ್ಥಕ | |
| 4. | (ಎ) | ನಡೆದೀತು | |
| 5. | (ಬಿ) | ಅತ್ತಣಿಂ | |
| 6. | (ಬಿ) | ವಾಗ್ದೇವಿ | |
| 7. | (ಸಿ) | ಆಗಮ | |
| 8. | (ಬಿ) | ಸನ್ನೆ | |
| 9. | (ಸಿ) | ಸಾಮಾನ್ಯಾನ್ವಯ | |
| 10. | (ಡಿ) | ತತ್ಪುರುಷ | |
| 11. | (ಎ) | ಆವರಣ | |
| 12. | (ಬಿ) | ಮಿಶ್ರವಾಕ್ಯ | |
| 13. | (ಸಿ) | ಸೂರ್ಯ | |
| 14. | (ಬಿ) | ನಡೆವಳಿಕೆ | |
| 15. | (ಡಿ) | ಇರುವೆವು | |

[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | ಹೊಂದಿಸಿ ಬರೆಯುವುದು. | 5 × 1 = 5 |
| | i) ಆ) ಮನವೊಲಿಸು | |
| | ii) ಋ) ಏಳು-ಬೀಳು | |
| | iii) ಊ) ತುತ್ತತುದಿ | |
| | iv) ಇ) ಜಂಗಾಲು | |
| | v) ಅ) ನಿನಗೋಸ್ಕರ | |
| | ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬುವುದು. | 5 × 1 = 5 |
| 17. | ಜೀವದಾನ | |
| 18. | ಅಪ್ಪಳಿಸುತ್ತಿದೆ | |
| 19. | ವಿದ್ಯಾರ್ಥಿವೇತನ | |
| 20. | ಹವಳದ | |
| 21. | ಧಾತ್ರಿಯೊಳ್ | |
| | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ. | 10 × 1 = 10 |
| 22. | ನವಶಿಲಾಯುಗದ ಮಾನವ ಸಂಚಾರಿ ಜೀವನವನ್ನು ತ್ಯಜಿಸಿ ಒಂದೆಡೆ ಬೀಡು ಬಿಟ್ಟು ಆಸ್ತಿ, ಮನೆ, ಬದುಕು ಮೊದಲಾದ ಭಾವನೆಗಳನ್ನು ತಳೆಯುವುದಕ್ಕೆ ಎಂದು ಮೊದಲು ಮಾಡಿದನೋ ಅಂದು ಆತನಿಗೆ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು. | |
| 23. | ಗೌರಿಯ ತಾಯಿ ಮತ್ತೊಮ್ಮೆ ಮಗನನ್ನು ಹೆತ್ತು ಮೇಯಲು ಹೋಗಿದ್ದವಳು ಗರೇಗುಡ್ಡದಲ್ಲಿ ಕಿರುಬನ ಬಾಯಿಗೆ ತುತ್ತಾದಳು ಎಂಬುದನ್ನು ನೆನೆದು, ಸಿದ್ದಪ್ಪನ ಕಣ್ಣಿನಿಂದ ನೀರು ಜಾರಿ ಎಸರಿನೊಲಕ್ಕೆ ಬಿತ್ತು. | |
| 24. | ವೆಂಕಣ್ಣ ಮೇಷ್ಟ್ರು ಜುಲ್ಮಾನೆ ವಿಧಿಸಿದ್ದಕ್ಕಾಗಿ ಹೆಚ್ಚು ಸಂಕಟ ಪಡುತ್ತಿದ್ದರು. | |
| 25. | ಕಾಲೇಜಿನ ಅಧ್ಯಾಪಕ ವರ್ಗದವರು ಅಲ್ಪ ಸಂಬಳ ಬರುತ್ತಿದ್ದರೂ ತಮ್ಮ ವೃತ್ತಿ ಪವಿತ್ರವಾದುದೆಂದು ತೃಪ್ತಿಯಿಂದ ಕಾರ್ಯ ನಿರ್ವಹಿಸುತ್ತಿದ್ದರು. | |
| 26. | ಸಿಯಾಚಿನ್ ಪ್ರದೇಶದ ವಶಕ್ಕಾಗಿ ಆಪರೇಷನ್ ಮೇಘನಾದ್ ಕಾರ್ಯಾಚರಣೆಯನ್ನು ನಡೆಸಲಾಯಿತು. | |
| 27. | ಮಳೆಯ ಬಿಲ್ಲಿನಲಿ (ಕಾಮನ ಬಿಲ್ಲಿನಲಿ) ಹಲವು ಬಣ್ಣಗಳು ಸೇರಿರುವಂತೆ ಶ್ರೀ ಭಾರತಿಯು ಭಾರತೀಯ ಭಾಷೆಗಳ ಕಾಂತಿಯಲಿ ತನ್ನ ನಿಜ ಮೂರುತಿ ತೋರುತ್ತಿದ್ದಾಳೆ. | |
| 28. | ಸೇರಿದವರನ್ನು ಪೋಷಣೆ, ರಕ್ಷಣೆ ಮಾಡುವುದು ದೊರೆಯಾದವನ ಕರ್ತವ್ಯ. | |
| 29. | ಎಲ್ಲವೂ ಒಂದೇ ಎಂಬ ಜ್ಞಾನವುಂಟಾದವನಿಗೆ, ಗೋಪಾಲ ವಿಠಲನಂಘ್ರಿ ಪಲ್ಲವವನು ಕಾಣಲು ಸಾಧ್ಯವಿಲ್ಲ. | |
| 30. | ಜನಪದರ ಪ್ರಕಾರ ಲೋಕದಲ್ಲಿ ಬೆಲೆಯಾದದ್ದು ಮಣ್ಣು. | |
| 31. | ಕಾಡಿನಲ್ಲಿ ಓಡುವ ಮೃಗವನ್ನು ಬೆನ್ನಟ್ಟಿ ಕೊಲ್ಲುವುದೇ ಶಬರನ ಕೆಲಸವೆಂದು ಅರ್ಜುನ ಹೇಳುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು. | 15 × 2 = 30 |
| 32. | ಮನದಲ್ಲಿ ಭಾವಗಳು ಮೂಡಿ ನಿಂತಾಗ ನಗು ಅಳು ಜನಿಸುತ್ತವೆ. ಚಿತ್ತ ವೃತ್ತಿಯಲ್ಲಿ ಹಾಸ್ಯಭಾವ ಮೂಡಿದಾಗ ನಗು, ಕ್ಲೇಶಭಾವ ಮೂಡಿದರೆ ಅಳು. ಅಳುವಿನಿಂದ ನಗೆ, ನಗೆಯಿಂದ ಅಳು ಹುಟ್ಟಲಾರವು ಆದ್ದರಿಂದ ಅವೆರಡೂ ಪರಸ್ಪರ ವಿರುದ್ಧವಾದುವು. | |
| 33. | ಸಿದ್ದೇಗೌಡನಿಗೂ ಮಗನಿಗೂ ನಡೆದ ಮಾತು. ಅಂಜುತ್ತಂಜುತ್ತಾ ಮಗ ಕೇಳಿದ್ದ; ''ಅಪ್ಪಾ... ಮಕ್ಕಳೆಲ್ಲಾ ಹೊಟ್ಟೆಗಿಲ್ದೆ ಸಾಯ್ತಾ ಅವೆ. ಗೌರಿ ಹಸು ಹ್ಯಾಂಗೂ ಮುದಿ ಆಗೋದ್ಲು. ಅವಳಿಗೂ ಸರಿಯಾಗಿ ಹುಲ್ಲೂ ನೀರಿಲ್ಲ. ಅದು ಈಟ್ಟನಗಂಟ ಬದುಕಿದ್ದೇ ಹೆಚ್ಚು. ಮಾರಿದರೆ ಒಂದ್ಹತ್ತು ರೂಪಾಯಾದ್ರೂ ಬತ್ತದೆ. ಮಕ್ಕಳು ಒಂದೆರಡು ದಿನ ಹಾಯಾಗಿ ಗಂಜೀನಾದ್ರೂ ಕುಡೀಬಹ್ದು ಎಂದಾಗ ಸಿದ್ದೇಗೌಡನಿಗೆ ಮಗನ ಮೇಲೆ ಕೋಪ ಬಂದಿತ್ತು. | |
| 34. | ಶಾಲೆಯ ನೋಟೀಸ್ ಬೋರ್ಡಿನ ಮೇಲೆ ಹೀಗೆ ಬರೆದಿತ್ತು<br>೧) ಮಕ್ಕಳು ಸರಿಯಾದ ಹೊತ್ತಿಗೆ ಶಾಲೆಗೆ ಬರಬೇಕು.<br>೨) ಪಾಠಕಾಲದಲ್ಲಿ ಗ್ರಾಮಸ್ಥರು ಒಳಕ್ಕೆ ಬರಕೂಡದು.<br>೩) ಶಾಲೆಗೆ ದಾಖಲೆಯಿಲ್ಲದ ಮಕ್ಕಳನ್ನು ಒಳಕ್ಕೆ ಸೇರಿಸುವುದಿಲ್ಲ.<br>೪) ಸ್ಕೂಲಿನ ಒಪ್ಪಾರದಲ್ಲಿ ಗ್ರಾಮಸ್ಥರು ಯಾರೂ ಕುಳಿತು ಗಲಾಟೆ ಮಾಡಕೂಡದು. | |
| 35. | ಕಾಲೇಜಿನಲ್ಲಿ ಬಿಡುವಿದ್ದಾಗ ಮಂಜಪ್ಪನವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳು; ಹೇಗಲ್, ಕ್ಯಾಂಟ್, ವಾಲ್ಟೇರ್, ರೂಸ್ಸೋ ಮುಂತಾದ ದಾರ್ಶನಿಕರ ಕೃತಿಗಳನ್ನೂ, ಗ್ರೀಕ್ ಮಹಾಕವಿ ಹೋಮರನ ''ಇಲಿಯಡ್ ಮತ್ತು ಒಡಿಸ್ಸಿ'' ಮಹಾಕಾವ್ಯಗಳನ್ನೂ, ಗಿಬ್ಬನ್‌ರವರ, 'ಉನ್ನತಿ ಮತ್ತು ಅವನತಿ' ಗ್ರಂಥವನ್ನೂ, ರವೀಂದ್ರನಾಥ ಠಾಗೂರ್, ಬರ್ನಾಡ್ ಷಾ, ಟಾಲ್‌ಸ್ಟಾಯ್ ಮುಂತಾದವರ ಕೃತಿಗಳನ್ನು ಅಧ್ಯಯನ ಮಾಡುತ್ತಿದ್ದರು. | |
| 36. | ಪ್ರತಿಯೊಂದು ದೈಹಿಕ ಸಂವೇದನೆ ಹಾಗೂ ಬಾಹ್ಯ ಪ್ರೇರಣೆಗೆ ನಾವು ನೀಡುವ ಪ್ರತಿಕ್ರಿಯೆ ನಮ್ಮ ಮೆದುಳಿನ ಹತ್ತು ಸಾವಿರ ಮಿಲಿಯನ್ ಕಣಗಳ ಮೇಲೆ ತಮ್ಮ ಮುದ್ರೆಯನ್ನು ಒತ್ತುತ್ತವೆ. ಈ ಪ್ರಭಾವ ಶಾಶ್ವತವಾಗಿದ್ದು ದಿನೇ ದಿನೇ ಬೆಳೆಯುತ್ತ ಹೋಗುತ್ತದೆ. ಅವುಗಳ ಒಟ್ಟು ಮೊತ್ತವೇ ಪ್ರತಿಯೊಬ್ಬರ ವ್ಯಕ್ತಿತ್ವ ಹಾಗೂ ನಡತೆ, ಒಳ್ಳೆಯ ಯೋಜನೆ, ಒಳ್ಳೆಯ ಕೆಲಸ, ಒಳ್ಳೆಯ ಅಭ್ಯಾಸಗಳು ವ್ಯಕ್ತಿಯ ವ್ಯಕ್ತಿತ್ವ ಹಾಗೂ ನಡತೆಯನ್ನು ರೂಪಿಸುತ್ತವೆ. | |
| 37. | ರಕ್ಷಣಾ ಪಡೆಗಳು ದೇಶದ ಏಕತೆ ಮತ್ತು ರಾಷ್ಟ್ರೀಯ ಭಾವೈಕ್ಯದ ಸಂಕೇತ. ದೇಶದ ಒಳಗಿನ ಮತ್ತು ಹೊರಗಿನ ರಕ್ಷಣೆಗೆ ಸೇನಾಪಡೆಗಳ ಸೇವೆ ಅತ್ಯವಶ್ಯಕವಾಗಿದೆ. ಇಂತಹ ಸೇವೆಗೆ ಸೈನಿಕರನ್ನು ಆಯ್ಕೆ ಮಾಡುವಾಗ ಎಲ್ಲಾ ಭಾರತೀಯರಿಗೂ ಯಾವುದೇ ಜಾತಿ, ಧರ್ಮ ಹಾಗೂ ಪ್ರಾದೇಶಿಕ ಭಿನ್ನತೆಯಿಲ್ಲದೆ, ಭೇದಭಾವವಿಲ್ಲದೆ ನೇಮಕಾತಿಯು ಮುಕ್ತವಾಗಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಎಲ್ಲಾ ಭಾರತೀಯರು ಸೇರುವುದರಿಂದ ರಕ್ಷಣಾ ಪಡೆಗಳು ದೇಶದ ಭಾವೈಕ್ಯತೆಯ ಸಂಕೇತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | ಪುರಾಣ ಕೂಪದ ಗೋಡೆಗಳು ಹೊಳೆಯುತ್ತಿದ್ದವು. ಬಾವಿಯಲ್ಲಿದ್ದ ನೀರು ತಿಳಿಯಾಗಿದ್ದು ಆ ನೀರಿನಲ್ಲಿ ಆಕಾಶದಲ್ಲಿ ಹೊಳೆಯುವ ಚಂದ್ರ, ನಕ್ಷತ್ರ ಮೂಲೆಗಳು ಪ್ರತಿಬಿಂಬಿಸುತ್ತಿದ್ದವು ಪರಿಪೂರ್ಣವಾದ, ಶ್ರೇಷ್ಠವಾದ, ಆಳವಾದ ಆ ಬಾವಿಯು ನೋಡಲು ಭಯವನ್ನುಂಟು ಮಾಡುವಂತಿತ್ತು. | |
| 39. | ಭಾರತೀಯ ನೌಕಾಪಡೆ, ಭೂಸೇನೆಯಷ್ಟೆ ಪುರಾತನವಾದುದು. ಪುರಾಣಗಳಲ್ಲಿ ನೌಕಾಪಡೆಯ ಬಗ್ಗೆ ಸಾಕಷ್ಟು ಉಲ್ಲೇಖಗಳಿವೆ. ಜಲಪ್ರಳಯದಿಂದ ಇಡೀ ಭೂಮಿಯೇ ನಾಶವಾಗುತ್ತಿರುವಾಗ ವಿಷ್ಣು ನೌಕೆಯನ್ನು ಬಳಸಿ ಸಪ್ತರ್ಷಿಗಳನ್ನೂ, ಮನುವನ್ನೂ ರಕ್ಷಿಸಿದ ಘಟನೆ ವಿಷ್ಣು ಪುರಾಣದಲ್ಲಿದೆ. ಚಿತ್ರಕೂಟದಲ್ಲಿದ್ದ ರಾಮನನ್ನು ಅಯೋಧ್ಯೆಗೆ ಕರೆದೊಯ್ಯಲು ಸೇನಾ ಸಮೇತನಾಗಿ ಬಂದ ಭರತನನ್ನು ಬಂಧಿಸಲು ಗುಹ ತನ್ನ ನೌಕಾಸೇನೆಗೆ ಆದೇಶ ನೀಡಿದ ಘಟನೆ ರಾಮಾಯಣದಲ್ಲಿದೆ. | |
| 40. | ಕವಿ ಅರವಿಂದ ಮಾಲಗತ್ತಿಯವರು ರಕ್ತ ಮೀರಿದ ಸಂಬಂಧದ ಹಿನ್ನೆಲೆಯನ್ನು ಹೀಗೆ ವರ್ಣಿಸುತ್ತಾರೆ. ಜನ್ಮಭೂಮಿ ಮತ್ತು ಮಾತೃಭೂಮಿಯು ಪ್ರತಿಯೊಬ್ಬ ವ್ಯಕ್ತಿಯ ಬದುಕಿನಲ್ಲಿಯೂ ಅತ್ಯಂತ ಮಹತ್ವವಾದದ್ದು. ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಜನ್ಮಭೂಮಿ ಮತ್ತು ಮಾತೃಭಾಷೆಗಳೆರಡೂ ಮುಖ್ಯ. ಆದ್ದರಿಂದಲೇ ಕವಿಯು ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲು, ಮಾತೃಭಾಷೆ ಅಮೃತಕ್ಕಿಂತಲೂ ಹೆಚ್ಚಾದುದು, ಇವೆರಡೂ ವ್ಯಕ್ತಿಯ ಕರುಳ ಬಳ್ಳಿಯ ಬಂಧವನ್ನೂ, ರಕ್ತದ ಸಂಬಂಧವನ್ನು ಮೀರಿದುದಾಗಿದೆ ಎಂದು ವರ್ಣಿಸಿದ್ದಾರೆ. | |
| 41. | ಸತಿಯಾದವಳು ಪತಿಯ ಸನ್ನೆಯರಿತು ನಡೆಯಬೇಕು. ಸ್ನೇಹಿತರು ಭಿನ್ನವರಿತು ನಡೆಯಬೇಕು. ಹಿಂದಿನ ಜನ್ಮದಲ್ಲಿ ಕೊಟ್ಟು, ದಾನ ಧರ್ಮ ಮಾಡದಿದ್ದರೆ ಈ ಜನ್ಮದಲ್ಲಿ ಬಯಸಬಾರದು. ತನ್ನ ನೆಂಟರಿಷ್ಟರು ಬಂಧು ಬಳಗವನ್ನು ಕೂಡಿ ಉಣ್ಣದಿದ್ದರೆ ಭಾಗ್ಯವು ಸಾರ್ಥಕವಾಗಲಾರದು. | |
| 42. | ತವರುಮನೆ ಕಾಶಿಯಷ್ಟೇ ಶ್ರೇಷ್ಠ, ಕಾಶಿಯಾತ್ರೆ ಮಾಡಲು ಹಲವು ದಿನಗಳೇ ಬೇಕು; ಶ್ರಮದಾಯಕವಾದುದು ತವರೂರು ತಾಸೊತ್ತಿನ ದಾರಿ ಅಲ್ಲಿ ಹಡೆದವ್ವ ಕಾಯ್ದು ಕುಳಿತಿದ್ದಾಳೆ. ತಾಯಿಯು ಭೀಮಾರತಿಯ ನದಿಯಂತೆ ಕುಟುಂಬವನ್ನು ಸಲಹುತ್ತಾಳೆ ತಾಯಿಯ ದೀಪದಂತೆ ಮನೆಯನ್ನು ಬೆಳಗುವವಳು ಎಂದು ಜನಪದರು ತಾಯಿಯ ಮಹತ್ವವನ್ನು ವರ್ಣಿಸಿದ್ದಾರೆ. | |
| 43. | ಕಾಡಿನಲ್ಲಿ ವಾಸಿಸುವ ನಿರುಪದ್ರವಿ ಜೀವಿಗಳಾದ ನರಿ, ಮೊಲ, ಜಿಂಕೆಗಳಲ್ಲಿ ನಿನ್ನ ಸಾಹಸವನ್ನು ತೋಳ್ಬಲವನ್ನು ತೋರಿಸು ಛಲದಂಕನಾದ ನನ್ನಲ್ಲಿ ಅಲ್ಲ. ನನ್ನೊಡನೆ ಯುದ್ಧ ಮಾಡಬೇಕಾದರೆ ನನಗೆ ಸರಿಸಮಾನನಾದ ನಿನ್ನ ಒಡೆಯನಿದ್ದರೆ ಅವನನ್ನು ಕರೆದುಕೊಂಡು ಬಾ ಎಂದು ಅರ್ಜುನ ಶಬರನಿಗೆ ಹೇಳಿದನು. | |
| 44. | ಪ್ರಕೃತಿಯಲ್ಲಿ ಸಹಜವಾದ ವೈವಿಧ್ಯತೆಯಿದ್ದರೂ, ಏಕತಾಭಾವವಿದೆ ಎಂದು ನಿರೂಪಿಸಲು ಅಕ್ಕನು ಕೆಲವು ನಿದರ್ಶನಗಳನ್ನು ನೀಡುತ್ತಾಳೆ. ಒಂದೇ ಜಲ, ನೆಲ, ಆಕಾಶಗಳು ಒಂದೇ ಆಗಿದ್ದರೂ ಈಳೆ, ನಿಂಬೆ, ಮಾವು ಮಾದಲ ಹುಳಿಯಾಗಿವೆ. ಕಬ್ಬು, ಬಾಳೆ ಹಲಸು, ನಾರಿಕೇಳ ಸಿಹಿಯಾಗಿವೆ. ಕಳವೆ, ರಾಜಾನ್ನ ಶಾಲ್ಯನ್ನಗಳಿಗೆ ಓಗರದ ರುಚಿ ಇದೆ. ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ ಪರಿಮಳವಿದೆ ಹೀಗೆ ಪ್ರಕೃತಿಯಲ್ಲಿ ಭಿನ್ನತೆಯಿದ್ದರೂ ಇವೆಲ್ಲವುಗಳಿಗೆ ಪೂರೈಸಿದ ನೆಲ-ಜಲ, ಆಕಾಶ ಒಂದೇ ಎಂದಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 45. | ಮುಕ್ತಾಯಕ್ಕನು ಅಜಗಣ್ಣನ ಗುಪ್ತ ಸಾಧನೆಯನ್ನು ಹೀಗೆ ವಿವರಿಸುತ್ತಾಳೆ, ಅಲರೊಳಡಗಿದ ಪರಿಮಳದಂತೆ ಪತಂಗದಲ್ಲಿ ಅಡಗಿದ ಅನಲನಂತೆ, ಶಶಿಯೊಳು ಅಡಗಿದ ಷೋಡಕ ಕಳೆಯಂತೆ ಉಲುಹಡಗಿದ ವಾಯುವಿನಂತೆ ಸಿಡಿಲೊಳಡಗಿದೆ ಗಾತ್ರ ದ ತೇಜದಂತೆ ಎಂದು ವಿವರಿಸುತ್ತಾಳೆ. | |
| 46. | ಯಾರೇ ತಡೆದರೂ ಕವಿ ಪಂಪನ ಮನಸ್ಸು ಬನವಾಸಿಯನ್ನು ನೆನೆಯಲು ಕಾರಣವಾದ ಅಂಶಗಳು<br>ತೆಂಕಣ ದಿಕ್ಕಿನಿಂದ ಬೀಸುವ ತಂಗಾಳಿ ಮೈಗೆ ಸೋಕಿದಾಗ, ಒಳ್ಳೆಯ ನುಡಿ ಮಾತುಗಳನ್ನು ಕೇಳಿದಾಗ, ಇಂಪಾದ, ಮಧುರವಾದ ಗಾನ ಕಿವಿ ತುಂಬಿದಾಗ ಸುಖನಿದ್ರೆ ಬಂದಾಗ ಬಿರಿದು ಸೌರಭ ಸೂಸುವ ಮಲ್ಲಿಗೆ ಕಂಡಾಗ ಹುಣ್ಣಿಮೆಯ ದಿನಗಳಲ್ಲಿ ಮಹೋತ್ಸವವನ್ನು ಕಂಡು ಪಂಪನ ಮನಸ್ಸು ಬನವಾಸಿಯನ್ನು ನೆನೆಯುತ್ತದೆ. | |
| | ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯುವುದು. | 5 × 3 = 15 |
| 47. | ''ಸಿಗುರು ತೆಗೆದ ಕಬ್ಬಿನಂತೆ ಉಷ್ಣ ಅಳಿದ ಹಾಲಿನಂತೆ''<br>ಈ ವಾಕ್ಯವನ್ನು ಎಂ. ಮರಿಯಪ್ಪ ಭಟ್‌ರವರ 'ಕನ್ನಡ ಸಂಸ್ಕೃತಿ' ಎಂಬ ಕೃತಿಯಿಂದ ಆಯ್ದ 'ನಮ್ಮ ಭಾಷೆ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. ಕವಿಗಳ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಕವಿಪುಂಗವರು, ಶರಣ ವರೇಣ್ಯರು ದಾನಶ್ರೇಷ್ಠ ಸುಲಭ ಮಾರ್ಗದಿಂದ ತಮ್ಮ ಅನುಭವ ಸಾರವನ್ನು ಸುಲಭವೂ ಸುಂದರವೂ, ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>ಹೀಗೆ ಕನ್ನಡ ಭಾಷೆ ಹದಗೊಂಡುದರಿಂದ ಅದು ಸುಲಿದ ಬಾಳೆಯ ಹಣ್ಣಿನಂತೆ, ಸಿಗುರು ತೆಗೆದ ಕಬ್ಬಿನಂತೆ, ಉಷ್ಣ ಅಳಿದ ಹಾಲಿನಂತೆ ಸುಲಭವೂ ರುಚಿಯುಳ್ಳದೂ ಆಗಿದೆ ಎಂದು ಕವಿ ಮಹಾಲಿಂಗರಂಗ ಉದ್ಘೋಷಿಸುತ್ತಾನೆ. | |
| 48. | ''ಮನಸ್ಸು ರೋಗವನ್ನು ಸೃಷ್ಟಿಸಬಲ್ಲುದು, ಗುಣಪಡಿಸಲೂ ಬಲ್ಲುದು !''<br>ಈ ವಾಕ್ಯವನ್ನು ಆಧ್ಯಾತ್ಮ ಸಾಹಿತಿ ಸ್ವಾಮಿ ಜಗದಾತ್ಮಾನಂದಜೀಯವರು ಬರೆದ 'ಬದುಕಲು ಕಲಿಯಿರಿ' ಎಂಬ ಗ್ರಂಥದಿಂದ ಆಯ್ದ 'ಶಕ್ತಿಯೇ ಜೀವನ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ತಾಳ್ಮೆ, ಪ್ರೀತಿ, ಕರುಣೆ, ದಾನಬುದ್ಧಿ, ನಿಸ್ವಾರ್ಥ ಸೇವಾ ಮನೋಭಾವ ಮೊದಲಾದ ರಚನಾತ್ಮಕ ಭಾವನೆಗಳು ದೇಹವೆಂಬ ಯಂತ್ರದ ಎಲ್ಲಾ ಭಾಗಗಳಲ್ಲಿ ಉತ್ಸಾಹಯುತ, ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುತ್ತವೆ. ನಿಷೇಧಮಯ ಭಾವನೆಗಳಿಂದ ಭಯ, ಚಿಂತೆ, ದ್ವೇಷ, ಅಸೂಯೆ, ಸೋಲಿನ ಮನೋಭಾವ, ಸಂಕುಚಿತ ಸ್ವಾರ್ಥದ ನಾನಾ ಅವತಾರಗಳು ದೇಹದ ಅಂಗಾಂಗಗಳಿಗೆ ಕೆಡುಕನ್ನುಂಟು ಮಾಡುತ್ತವೆ. ಮನಸ್ಸಿನಲ್ಲಿ ಉದಿಸುವ ಯೋಜನೆ ಎಂಬ ದ್ರವ್ಯದಿಂದ ವಿಷಯವನ್ನೂ ತಯಾರಿಸಬಹುದು, ಅಮೃತವನ್ನೂ ತಯಾರಿಸಬಹುದು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| 49. | ''ಗಾವಸಿಂಗಮೆಂದುದು ನಿನ್ನಂ''<br>ಈ ವಾಕ್ಯವನ್ನು ದುರ್ಗಸಿಂಹ ಕವಿಯು ಬರೆದ ಕನ್ನಡ ಪಂಚತಂತ್ರ ಎಂಬ ಚಂಪೂಕಾವ್ಯದಿಂದ ಆಯ್ದ 'ಮೊಲಂ ಸಿಂಹಮಂ ಕೊಂದ ಕಥೆ' ಎಂಬ ಗದ್ಯ ಪಾಠದಿಂದೆ ಆರಿಸಿಕೊಳ್ಳಲಾಗಿದೆ.<br>ಸಿಂಹಕ್ಕೆ ಆಹಾರವಾಗಿ, ತಡವಾಗಿ ಬಂದ ಮೊಲವನ್ನು ಹಸಿದಿದ್ದ ಸಿಂಹವು ಕೋಪದಿಂದೆ ಪ್ರಶ್ನಿಸಿದಾಗ, ಮೊಲವು ತಾನು ಬರುವ ದಾರಿಯಲ್ಲಿ ಅಡ್ಡಗಟ್ಟಿ ತನ್ನನ್ನು ತಡೆದು ನಿಲ್ಲಿಸಿದ ಸಿಂಹವು ನಿಮ್ಮನ್ನು ಕುರಿತು ಹೀಗೆ ಹೇಳಿತು ಎಂದು ವೃತ್ತಾಂತವನ್ನು ವಿವರಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ. ಈ ಮಾತನ್ನು ದೀರ್ಘಕರ್ಣನೆಂಬ ಮೊಲವು ಹೇಳುತ್ತದೆ.<br>ಬಲಿಷ್ಠವಾದ ದೊಡ್ಡ ಆನೆಗಳಿಗೆ ಹೆದರಿ, ಮೃಗಗಳನ್ನು ಆಯ್ದು ತಿನ್ನುವ ಅದು ಸಿಂಹವಲ್ಲ ಅದು ನಿಮ್ಮನ್ನು ಗಾವಸಿಂಗಮೆಂದುದು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 50. | ''ಬರಿಗನಸುಗಾವರವ ಮಾಣು'' | |
| | ಈ ವಾಕ್ಯವನ್ನು ಸೇಡಿಯಾಪು ಕೃಷ್ಣ ಭಟ್ಟರು ಬರೆದ ಚಂದ್ರಖಿಂಡ ಮತ್ತು ಕೆಲವು ಸಣ್ಣ ಕಾವ್ಯಗಳು ಕವನ ಸಂಕಲನದಿಂದ ಆಯ್ದು 'ಜಯ ಭಾರತ ಪುತ್ರ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. | |
| | ಭಾರತದೇಶದಲ್ಲಿ ಪ್ರಾರಂಭದಿಂದಲೂ ಆರ್ಯರು ಮತ್ತು ದ್ರಾವೀಡರು ಒಂದುಗೂಡಿ ಭಾರತಾಂಬೆಯ ಹಾಲುಂಡು ಬೆಳೆದಿದ್ದಾರೆ, ತಾಮ್ರ, ತವರಗಳು ಕೂಡಿ ಘನಗಂಟೆಯಾದಾಗ ಅದರಿಂದ ಹೊರಡುವ ಧ್ವನಿ ಒಂದೇ ಆಗಿರುತ್ತದೆ. ಆದರೆ ಇಂದು ಆರ್ಯರು, ದ್ರಾವೀಡರ ನಡುವೆ ಭೇದ ವೆಣೆಸಿ ಚಳುವಳಿ ಮಾಡುವುದು ಕೇವಲ ಗದ್ದಲ ಅದನ್ನು ಬಿಟ್ಟು ಬಿಡಿ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| 51. | ''ವೇದ ಕುರಾನ ಬೈಬಲ್ ಸಿಂಧು ನೀ.'' | |
| | ಈ ವಾಕ್ಯವನ್ನು ಅರವಿಂದ ಮಾಲಗತ್ತಿಯವರು ಬರೆದಿರುವ 'ನಾದ ನಿನಾದ' ಎಂಬ ಕವನ ಸಂಕಲನದಿಂದ ಆಯ್ದುಕೊಂಡಿರುವ 'ಮಾತೃಭೂಮಿ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ಭಾರತಮಾತೆಯ ವೈಶಿಷ್ಟ್ಯತೆಯನ್ನು ಕುರಿತು, ಭಾರತಮಾತೆಯ ಅನೇಕತೆಯಲ್ಲಿ ಏಕತೆಯನ್ನು ಹೊಂದಿದವಳು ಸಂಸ್ಕೃತಿ, ಭೌಗೋಳಿಕ ಹಿನ್ನೆಲೆ, ಸ್ವಾಭಾವಿಕ ಸಂಪತ್ತು ತುಂಬಿದೆ. ಪ್ರಜಾಮಾತೆಯೂ, ವಿಶ್ವಬಂಧುವೂ ಆಗಿರುವೆ ಭಾರತಮಾತೆ ಸಾಗರದಂತೆ ತನ್ನ ಒಡಲಲ್ಲಿ ಎಲ್ಲಾ ಧರ್ಮದವರೂ, ಎಲ್ಲಾ ಜಾತಿಯವರೂ ಸಮಾನ ಅವಕಾಶವನ್ನು ಪಡೆಯುತ್ತಿದ್ದಾರೆ ಬಹು ಸಂಸ್ಕೃತಿಯ ಬೀಡು, ವೇದ ಕುರಾನ್ ಬೈಬಲ್ ಧಾರ್ಮಿಕ ಸಾಮರಸ್ಯದ ಸಿಂಧುವಾಗಿದ್ದಾಳೆ ಎಂದು ಹೇಳುವೆ ಸಂದರ್ಭದಲ್ಲಿ ಈ ಮಾತು ಬಂದಿದೆ. | |
| | ಲೇಖಕ, ಕವಿಗಳ ಸ್ಥಳ, ಕಾಲ, ಕೃತಿಗಳನ್ನು ಬರೆಯುವುದು : | $2 \times 3 = 6$ |
| | ಕವಿ ಪರಿಚಯದ ಉತ್ತರದಲ್ಲಿ ಸ್ಥಳ ಕಾಲಗಳಿಗೆ 1 ಅಂಕ, ಕೃತಿ ಪ್ರಶಸ್ತಿಗಳಿಗೆ 1 ಅಂಕ ಹಾಗೂ ವಾಕ್ಯರೂಪದ ವಿವರಣೆ ಭಾಷೆ, ಶೈಲಿಗಳಿಗೆ ಒಂದು ಒಂಕ ಒಟ್ಟಾರೆ ಪ್ರತಿ ಉತ್ತರಕ್ಕೆ 3 ಅಂಕಗಳು. | |
| 52. | ಎಂ.ಎಸ್. ಸುಂಕಾಪುರ : | |
| | ಗದಗ ಜಿಲ್ಲೆಯ ಮುಳಗುಂದದಲ್ಲಿ 1921 ರಲ್ಲಿ ಜನಿಸಿದ ಸುಂಕಾಪುರರವರು ಬೆಳಗಾವಿ, ಬಾಗಲಕೋಟೆಯಲ್ಲಿ ಅಧ್ಯಾಪಕರಾಗಿ ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಸೇವೆಸಲ್ಲಿಸಿದ್ದಾರೆ. ಪ್ರಸಿದ್ಧ ಹಾಸ್ಯ ಸಾಹಿತಿಯಾದ ಇವರು ಕನ್ನಡ ಸಾಹಿತ್ಯದಲ್ಲಿ ಹಾಸ್ಯ, ನಗೆಹೊಗೆ, ಗಪ್‌ಚಿಪ್, ತಲೆಹರಟೆಗಳು, ನಗೆಗಾರ ನಯಸೇನ, ಜೀವನದಲ್ಲಿ ಹಾಸ್ಯ ಮುಂತಾದ ಮೌಲಿಕ ಕೃತಿಗಳನ್ನಲ್ಲದೆ ರೇಡಿಯೋ ನಾಟಕಗಳು, ನಮ್ಮ ನಾಟಕಗಳು ಎಂಬ ದೃಶ್ಯಕಾವ್ಯಗಳು, ಪ್ರಭುಲಿಂಗಲೀಲೆ, ಗಿರಿಜಾ ಕಲ್ಯಾಣ, ಶಬರ ಶಂಕರೆ ವಿಳಾಸ, ಶ್ರೀ ಕೃಷ್ಣ ಪಾರಿಜಾತ ಮೊದಲಾದ ಕೃತಿಗಳನ್ನು ಸಂಪಾದಿಸಿದ್ದಾರೆ. | |
| 53. | ನೃಪತುಂಗ : | |
| | ಕ್ರಿ.ಶ. 814 ನೃಪತುಂಗರ ಕಾಲ. ಮಾನ್ಯಖೇಟ ಇವರ ಸ್ಥಳ. ಇವರ ಪೂರ್ಣ ಹೆಸರು ಅಮೋಘವರ್ಷ ನೃಪತುಂಗ. ಇವರು ರಾಷ್ಟ್ರಕೂಟ ವಂಶದ ರಾಜ. ಇವರಿಗೆ ರಟ್ಟಮಾರ್ತಾಂಡ, ಅತಿಶಯದವಳ. ವೀರನಾರಾಯಣ ಎಂಬ ಬಿರುದುಗಳಿದ್ದವು ಕನ್ನಡದ ಪ್ರಾಚೀನ ಗ್ರಂಥಗಳಲ್ಲಿ ಒಂದಾದ 'ಕವಿರಾಜ ಮಾರ್ಗ'ವು ಈತನ ಕೃತಿಯಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

**54.** ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯುವುದು. — 1 × 3 = 3

| ಭ | ರ | ನ | ಭ | ಭ | ರ | ಲ ಗು |
|---|---|---|---|---|---|---|
| _ U U | _ U _ | U U U | _ U U | _ U U | _ U _ | U _ |
| ಜಾಗದ | ಬೋಗದ | ಕ್ಕರದ | ಗೇಯದ | ಗೊಟ್ಟಿಯ | ಲಂಪಿ ನಿಂ | ಪುಗಳ್ಗಾ |

ಇದು ಅಕ್ಷರಗಣ ಛಂದಸ್ಸಿನ ಉತ್ಪಲಮಾಲಾ ವೃತ್ತದ ಲಕ್ಷ್ಯವಾಗಿದೆ.

| | |
|---|---|
| ಪ್ರಸ್ತಾರ | 1 ಅಂಕ |
| ಗಣ ವಿಭಾಗ | 1 ಅಂಕ |
| ಛಂದಸ್ಸಿನ ಹೆಸರು | 1 ಅಂಕ |
| ಒಟ್ಟು | 3 ಅಂಕಗಳು |

**55.** ''ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು.'' — 1 × 3 = 3

ಉಪಮೇಯ : ಸೀತೆಯ ಮುಖ

ಉಪಮಾನ : ಕಮಲ

ಅಲಂಕಾರ : ಉತ್ಪ್ರೇಕ್ಷಾಲಂಕಾರ

ಸಮನ್ವಯ : ಉಪಮೇಯವಾದ ಸೀತೆಯ ಮುಖವನ್ನು ಕಮಲವೆಂಬುದಾಗಿ ಕಲ್ಪಿಸಿಕೊಳ್ಳಲಾಗಿರುವುದರಿಂದ ಇದು ಉತ್ಪ್ರೇಕ್ಷಾಲಂಕಾರ

ಅಲಂಕಾರದ ಲಕ್ಷಣ : ಉಪಮೇಯವನ್ನು, ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು ಉತ್ಪ್ರೇಕ್ಷಾಲಂಕಾರ

| | |
|---|---|
| ಅಲಂಕಾರದ ಹೆಸರು | 1 ಅಂಕ |
| ಲಕ್ಷಣ ಬರೆದು ಸಮನ್ವಯ | 2 ಅಂಕಗಳು |
| ಒಟ್ಟು | 3 ಅಂಕಗಳು |

**56.** ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯುವುದು. — 1 × 3 = 3

| | |
|---|---|
| ಗಾದೆಯ ಮಹತ್ವ ಮತ್ತು ಅರ್ಥ | 1 ಅಂಕ |
| ಭಾಷಾ ಶೈಲಿ, ಉದಾಹರಣೆಯೊಂದಿಗೆ ವಿವರಣೆ | 2 ಅಂಕಗಳು |
| ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 57. | ಪದ್ಯ ಭಾಗ ಪೂರ್ಣ ಮಾಡಿ :<br><br>ಪರರ ಕಣ್ಣ ಕನ್ನಡಕದಲ್ಲಿ ಜಗದಿರವ ನೋಡುವುದ ತೊರೆ<br>ಶ್ರೀ ಹೃದಯಶಾರದೆಯ ಭಜಿಸಿ ಪಡೆದವಳ ಕರದ ಪುಸ್ತಕವ ತೆರೆ<br>ಭವ ಸಮುದ್ರದೊಳ್ ದುಮುಕಿ ತಂದು ನವರತ್ನ ವರ್ಷಗಳ ಕರೆ<br>ಜಗದ ಭಯದ ಶಲ್ಯಗಳ ತುಡುಕಿ ಹಿಡಿದೆಳೆ, ದೀಪ್ತಿಯಲಿ ಬೆಳೆ !<br><br>ಅಥವಾ<br><br>ಆ ರವಮಂ ನಿರ್ಜಿತ ಕಂ<br>ಠೀರವರವಮಂ ನಿರಸ್ತಘನರವಮಂ ಕೋ<br>ಪಾರುಣ ನೇತ್ರಂ ಕೇಳ್ದಾ<br>ನೀರೊಳಗಿರ್ದುಂ ಬೆಮರ್ತನುರಗಪತಾಕಂ | 1 × 4 = 4 |
| 58. | ಪದ್ಯಭಾಗದ ಸಾರಾಂಶವನ್ನು ಬರೆಯುವುದು.<br><br>ಕೆಲವನ್ನು ತಿಳಿದವರಿಂದ ಕಲಿಯಬೇಕು, ಕೆಲವನ್ನು ಶಾಸ್ತ್ರಗಳನ್ನು ಕೇಳಿ ತಿಳಿಯಬೇಕು. ಕೆಲವನ್ನು ಮಾಡುವವರಿಂದ ನೋಡಿ ಕಲಿತು, ಕೆಲವನ್ನು ಸ್ವತಃ ಆರ್ಜಿತ ಜ್ಞಾನದಿಂದ ಕಲಿಯಬೇಕು ಕೆಲವನ್ನು ಸಜ್ಜನರ ಸಹವಾಸದಿಂದ ಕಲಿತು ಮನುಷ್ಯನು ಸರ್ವಜ್ಞನಾಗಬೇಕು ಹಲವು ಹಳ್ಳಗಳು ಸೇರಿ ಸಮುದ್ರವಾಗುವಂತೆ ಮನುಷ್ಯನು ಎಲ್ಲರಿಂದಲೂ ಅರಿತು ಸರ್ವಜ್ಞನಾಗಬಹುದೆಂದು ಕವಿ ಪುಲಿಗೆರೆ ಸೋಮನಾಥರು ಹೇಳಿದ್ದಾರೆ.<br><br>ಮನುಷ್ಯ ನಿರಹಂಕಾರಿಯಾಗಿ, ವಿನಮ್ರತೆಯಿಂದ ಕಲಿತು ಅರಿತಾಗ ಸರ್ವಜ್ಞನಾಗುತ್ತಾನೆ ಎಂಬುದು ಈ ಪದ್ಯದ ಆಶಯವಾಗಿದೆ. | 1 × 4 = 4 |
| 59. ಮತ್ತು 60. | ಎಂಟು ಅಥವಾ ಹತ್ತು ವಾಕ್ಯಗಳ ಗದ್ಯದ ಪ್ರಶ್ನೆಗಳಿಗೆ.<br><br>— ಅಂಗುಲಿಮಾಲನ ಮನಸ್ಸು ಪರಿವರ್ತನೆಗೊಂಡ ಬಗೆ<br><br>ಇಹಲೋಕದ ಸರ್ವಭೌಮನೆಂದೂ, ಮಹಾಕ್ರೂರಿಯೆಂದೂ, ನರಭಕ್ಷಕನೆಂದೂ ಕುಖ್ಯಾತಿ ಪಡೆದ್ದವನು ಅಂಗುಲೀಮಾಲ. ಆತನು ನಿರ್ದಯೆಯಿಂದ ಕೊಂದ ರಾಜ ಮಹಾರಾಜರ ಹೆಬ್ಬೆರಳುಗಳನ್ನು ತನ್ನ ಕೊರಳಿನಲ್ಲಿ ಹಾರವಾಗಿ ಹಾಕಿಕೊಂಡಿದ್ದರಿಂದ, ಅಂಗುಲೀಮಾಲನೆಂಬ ಹೆಸರು ಅನ್ವರ್ಥಕವಾಗಿತ್ತು. ಇಂತಹವನನ್ನು ಶಾಕ್ಯಮುನಿ ಬುದ್ಧದೇವನು ನೋಡಲು ಬಂದಾಗ ''ನಿಲ್ ಅಲ್ಲೆ ಓ ಮನುಜ ಅಲ್ಲೆ ನಿಲ್'' ಎಂದು ಕೂಗುತ್ತಾನೆ. ಈ ಮಾತಿಗೆ ಬುದ್ಧನು ''ನಿಂತೆ ಇರುವೆನು ನಾನು ನೀನಿನ್ನು ನಿಂತಿಲ್ಲವೆಂದು ಹೇಳುತ್ತಾ ನಡೆಯುತ್ತಲೇ ಬರುತ್ತಾನೆ. ಜಗತ್ತಿನ ಲೌಕಿಕ ದಂದುಗದಿಂದ ವೈರಾಗ್ಯಗೊಂಡು ಲೌಕಿಕ ಆಶಾಪಾಶದಿಂದ ದೂರವಾಗಿದ್ದೇನೆ. ನೀನಿನ್ನು ಅದೇ ಕ್ರೂರತನ ಅಹಂಕಾರ ಅಮಾನವೀಯ ಬದುಕಿಗೇ ಅಂಟಿಕೊಂಡಿರುವ ಎಂಬರ್ಥದಲ್ಲಿ ಬುದ್ಧ ಹೇಳುತ್ತಾನೆ. | 2 × 4 = 8 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕತ್ತಿಯನ್ನೆತ್ತಿ ಬುದ್ಧನನ್ನು ತೀರ ಸಮೀಪಿಸಿದಾಗ ಬುದ್ಧ ತಲೆಯೆತ್ತಿ ನೋಡುತ್ತಾನೆ. ಅಂಗುಲೀಮಾಲನ ಕಣ್ಣು ಬುದ್ಧನ ಕಣ್ಣುಗಳನ್ನು ದಿಟ್ಟಿಸಿ ನೋಡುತ್ತದೆ. ಒಡನೆಯೇ ಕೈಯ ಕತ್ತಿ ಕೆಳಗೆ ಬೀಳುತ್ತದೆ. ತನ್ನ ಮುಂದೆ ನಿಂತಿರುವವನು ಬುದ್ಧದೇವನೆಂದು ಅರಿತಾಗ ಕಕ್ಕಾಬಿಕ್ಕಿಯಾಗುತ್ತಾನೆ. ''ನಿನ್ನ ಕಣ್ಣುಗಳಲ್ಲಿ ಕಡಲುಗಳು ಉರುಳುತಿವೆ, ಕಾಣದಿಹೆ ಯಾವುದೋ ಲೋಕಗಳು ಅರುತ್ತಿವೆ! ಎಂದು ಅಂಗುಲೀಮಾಲನು ನುಡಿದಾಗ ''ಎಲ್ಲವೂ ಬಯಲ ಭ್ರಾಂತಿಯು ಕಂದ! ಎಂದ ಬುದ್ಧನ ಮಾತು ಅವನಿಗೆ ಹೊಸ ಅನುಭವ ನೀಡುತ್ತದೆ. ಆತನ ಕೈಯಲ್ಲಿದ್ದ ಖಡ್ಗ ಧರೆಗುರುಳುತ್ತದೆ. ಇದರಿಂದ ಅಂಗುಲೀಮಾಲನಿಗೆ ಆಶ್ಚರ್ಯವಾಗುತ್ತದೆ. ನಿರ್ವಿಕಾರಿಯಾಗಿ ಬುದ್ಧನು ತನ್ನ ಬೆರಳನ್ನು ನೀಡಲು ಮುಂದಾಗುವುದು ಇದುವರೆವಿಗೆ ಗೆದ್ದಿರುವ ರಾಜ್ಯವೆಲ್ಲವ ಮೀರಿದ ರಾಜ್ಯವನ್ನು ಗೆಲ್ಲಬೇಕೆಂದು ಪ್ರೇರೇಪಿಸುವುದು, ಈ ಎಲ್ಲಾ ಬುದ್ಧನ ಮಾತುಗಳು ಅಂಗುಲೀಮಾಲನಲ್ಲಿರುವ ದುರಹಂಕಾರವನ್ನು ಕಡಿಮೆ ಮಾಡುವ ದಿಸೆಯಲ್ಲಿ ಸಾಗುತ್ತವೆ. ವೈಭವದ ರಾಜ್ಯದ ಗೆಲ್ಲುವ ಮುನ್ನ ನಿನ್ನನೀ ಗೆಲ್ಲಬೇಕು ಎಂಬ ಮಾತು ಅಂಗುಲೀಮಾಲನಿಗೆ ಒಗಟಾಗಿ ಕಾಣುತ್ತದೆ. ನಿನ್ನ ಮನದಾಶಾ ಪಿಶಾಚಕ್ಕೆ ನೀ ಆಳಾಗಿರುವೆ ಎಂಬ ಮಾತು ಅಂಗುಲೀಮಾಲನನ್ನು ಕೆರಳಿಸಿದರೂ, ಬುದ್ಧನ ಕಾಲಬಳಿ ಕುಸಿಯುತ್ತಾನೆ. ಬುದ್ಧನು ಅವನನ್ನು ಅಪ್ಪಿಕೊಂಡಾಗ ಅನಿರ್ವಚನೀಯ ಅನುಭವವನ್ನು ಅನುಭವಿಸುತ್ತಾ ಕ್ರಮೇಣ ಅಂಗುಲೀಮಾಲನ ಮನಸ್ಸು ಬುದ್ಧನ ಉಪದೇಶಕ್ಕೆ ಬಾಗುತ್ತದೆ. ಕಿತ್ತೆಸೆಯೋ ಅಂಗುಲೀಮಾಲೆಯನ್ನು ಕರ್ಮಪಾಶವನ್ನು ಮಕುಟವನ್ನು, ತೊತ್ತುತನದಪ ಮಾನ ಚಿಹ್ನೆಯನು ಕಿತ್ತೆಸೆಯಲು ಹೇಳುತ್ತಾನೆ. ಬುದ್ಧನ ಮಾತಿನಂತೆ ಅವೆಲ್ಲವನ್ನೂ ಕಿತ್ತೆಸೆದು ಮಾನಸಿಕವಾಗಿ ಆನಂದವನ್ನನುಭವಿಸುತ್ತಾನೆ ಹೀಗೆ ಬುದ್ಧನ ಕೃಪಾದೃಷ್ಟಿ ಅಂಗುಲೀಮಾಲನ ಕ್ರೂರತನವನ್ನು ನಾಶಪಡಿಸುತ್ತದೆ. | |
| | — ಅಮಾತ್ಯರಾಕ್ಷಸನು ನಿಶಸ್ತ್ರನಾಗಿ ಶೂಲಸ್ಥಾನಕ್ಕೆ ಹೋಗುವಂತಾಗಲು ಪಶುಲೋಮ ಮಾಡಿದ ಉಪಾಯ | |
| | ಪಶುಲೋಮನು ಚಂದನದಾಸನ ಸ್ಥಿತಿಯನ್ನು ಅಮಾನ್ಯ ರಾಕ್ಷಸನಿಗೆ ವಿವರಿಸುತ್ತಾನೆ. ಅಮಾತ್ಯನು ಕೈಯ ಖಡ್ಗವನ್ನು ಝಳಪಿಸುತ್ತಾ, ಯುದ್ಧ ಮುಖದಿಂದ ಚಂದನದಾಸನನ್ನು ಬಿಡಿಸಲು ಮನಸ್ಸು ಮಾಡುತ್ತಿದ್ದಂತೆ ಪಶುಲೋಮನು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅಮಾತ್ಯನು ತನ್ನ ಕೈಯಲ್ಲಿರುವ ಖಡ್ಗವನ್ನು ಬಿಸುಟು ನಿಶ್ಯಸ್ತ್ರನಾಗಿ ಹೋಗುವಂತೆ ಮಾಡಲು ಉಪಾಯ ಮಾಡುತ್ತಾನೆ. ''ಆಪದ್ಬಂಧುಗಳಾಗಿ ಬಂದ ನಿಮ್ಮಿಂದ ನಮ್ಮೆಲ್ಲ ವಿಪತ್ತುಗಳು ದೂರಾದವು. ಆದರೆ ನಿಮ್ಮಲ್ಲಿ ಇನ್ನೊಂದು ವಿಜ್ಞಾಪನೆಯುಂಟೆಂದು ಹೇಳುತ್ತಾ ''ತಾವು ಈಗ ಶೌರ್ಯ ಮುಖದಿಂದ ಮಿತ್ರನಾದ ಚಂದನದಾಸನಿಗೆ ಕ್ಷೇಮವನ್ನುಂಟು ಮಾಡುವೆವೆಂದು ಶಪಥವನ್ನು ಮಾಡಿದಿರಿ. ಇದರಿಂದ ಒಂದು ತೊಂದರೆಯುಂಟಾಗುವುದು ಹೀಗೆಂದು ''ಮೊದಲು ಚಾಣಕ್ಯನು ಶಕಟದಾಸನೆಂಬುವವನ್ನು ಶೂಲಕ್ಕೆ ಹಾಕುವಂತೆ ನೇಮಿಸಿ ಮಧ್ಯ ಸ್ಥಾನಕ್ಕೆ ಕಳುಹಿಸಲು ಆ ಸಮಯದಲ್ಲಿ ಯಾರೋ ಒಬ್ಬ ಪುರುಷನು ಖಡ್ಗಪಾಣಿಯಾಗಿ ಬಂದು ಕರೆದುಕೊಂಡು ಹೋಗುತ್ತಿರುವ ಘಾತುಕರ ಮೇಲೆ ಬಿದ್ದು ಅವರನ್ನು ಓಡಿಸಿ ಶಕಟದಾಸನನ್ನು ಬಿಡಿಸಿಕೊಂಡು ಹೋದನಂತೆ. ಅದನ್ನು ಕೇಳಿ ಕೋಪಗೊಂಡ ಚಾಣಕ್ಯನು ಶಕಟದಾಸನನ್ನು ಬಿಟ್ಟ ಅಪರಾಧಕ್ಕೆ ಆ ಕಡಿಗರನ್ನು ಕೊಲ್ಲಿಸಿದನು. ಅಂದು ಮೊದಲ್ಗೊಂಡು ರಾಜಾಪರಾಧಿಗಳನ್ನು ವಧ್ಯಸ್ಥಾನಕ್ಕೆ ಕರೆದುಕೊಂಡು ಹೋಗುವಾಗ ಅಲ್ಲಿಗೆ ಮತ್ತೆ ಯಾರಾದರೂ ಖಡ್ಗಪಾಣಿಯಾಗಿ ಬಂದವನನ್ನು ಬಂದಿಸಿ ತರಬೇಕೆಂದೂ, ಆ ರಾಜದ್ರೋಹಿಯನ್ನು ಸಂಹರಿಸಬೇಕೆಂದು ಚಾಣಕ್ಯರ ಆಜ್ಞೆಯಾಗಿದೆ. ಈಗ ಚಂದನದಾಸನನ್ನು ವಧ್ಯಸ್ಥಾನಕ್ಕೆ ಕರೆತರುವ ಸಮಯವು ಸನ್ನಿಹಿತವಾಗಿದೆ. ಈ ವೇಳೆಯಲ್ಲಿ ಆತನನ್ನು ರಕ್ಷಿಸುವುದು ಸತ್ಯವಾದರೆ ಶೂಲದೆಡೆಗೆ ನೀವು ಖಡ್ಗಪಾಣಿಗಳಾಗಿ ಹೋಗುವುದು ತೊಂದರೆಯಾಗಿ ತೋರುತ್ತಿದೆ. ಎಂದು ವಿಜ್ಞಾಪಿಸಲು ಇದನ್ನರಿತ ಅಮಾತ್ಯರಾಕ್ಷಸನು ಶೂಲದೆಡೆಗೆ ನಿಸ್ಯಸ್ತ್ರನಾಗಿ ಹೋಗಲು ತೀರ್ಮಾನಿಸುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ತಿಪ್ಪೇನಹಳ್ಳಿ ಶಾಲೆಗೆ ಪರಂಗಿ ಟೋಪಿ ಸಾಹೇಬರು ಭೇಟಿ ನೀಡಿದ ಪ್ರಸಂಗ | |
| | ತಿಪ್ಪೇನಹಳ್ಳಿ ಶಾಲೆಯ ಮೇಷ್ಟ್ರು ರೂಲ್ಸಿಗೆ ಅನುಸಾರವಾಗಿಯೇ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಒಂದು ದಿವಸ ಪರಂಗಿ ಟೋಪಿ ಸಾಹೇಬರು ಮೋಟಾರು ರಸ್ತೆಯಲ್ಲಿ ಬಂದು ನಿಂತಿತು. ಸರಸರನೆ ಮೋಟಾರಿನಿಂದಿಳಿದು ಪಾಠಶಾಲೆಯ ಒಳಕ್ಕೆ ಬಂದುಬಿಟ್ಟರು! ಕುರ್ಚಿಯ ಮೇಲೆ ಕೂಡ ಕುಳಿತುಕೊಳ್ಳಲಿಲ್ಲ. ಅವರು ಸಾಹೇಬರೆಂಬುದೇ ಮೇಷ್ಟ್ರಿಗೆ ತಿಳಿಯಲಿಲ್ಲ! ಹಾಜರಿ ಎಷ್ಟು ? ಎಂದು ಕೇಳಿದರು. ಮೇಷ್ಟ್ರು ಮೂವತ್ನಾಲ್ಕು ಸ್ವಾಮಿ ಎಂದು ಹೇಳಿದರು. ಹಾಗೆಯೇ ಹುಡುಗರನ್ನು ಎಣಿಸಿ ಮುವತ್ನಾಲ್ಕು ಮಕ್ಕಳಿದ್ದಾರೆ; ಹೆಚ್ಚಿಗೆ ಇರುವವರನ್ನು ಹೊರಕ್ಕೆ ಕಳಿಸಿ ಎಂದು ಕೋಪದಿಂದ ಹೇಳಿದರು. ಆಗ ಮೇಷ್ಟ್ರು ತಮ್ಮ ಮಕ್ಕಳಿಗೆ ಹೊರಕ್ಕೆ ಹೋಗಿ ಎಂದು ಹೇಳಿದರೂ, ಸಹೇಬರನ್ನು ನೋಡಿ ಮೊದಲೇ ಭಯಪಟ್ಟಿದ್ದ ಮಕ್ಕಳು ಹೊರಕ್ಕೆ ಹೋಗುವ ಬದಲು ಮೇಷ್ಟ್ರು ಹತ್ತಿರ ಬಂದು ನಿಂತುಕೊಂಡವು! ತಾಯಿ ಕೈಬಿಟ್ಟು ಹೋದ ಮಕ್ಕಳು! ತಂದೆಯನ್ನು ಅಂಟಿಕೊಂಡಿರದೆ ಹೇಗೆ ಹೊರಗೆ ಹೋಗುತ್ತವೆ! ಮಕ್ಕಳನ್ನೆಲ್ಲ ಆಟಕ್ಕೆ ಬಿಟ್ಟಿದ್ದರೆ ಅವರೂ ಬುಡಬುಡನೆ ಓಡಿ ಹೋಗುತ್ತಿದ್ದರೆ! ಅಷ್ಟರಲ್ಲೇ ಪರಂಗಿ ಟೋಪಿ ಸಾಹೇಬರು ಗಿರಕ್ಕನೆ ತಿರುಗಿಕೊಂಡು ಹೊರಟು ಬಿಟ್ಟರು. ಮೇಷ್ಟ್ರು ಸ್ವಾಮಿ! ಇವು ನನ್ನ ಮಕ್ಕಳು! ತಬ್ಬಲಿಗಳು! ಎಂದು ಹೇಳುತ್ತಾ ಹಿಂದೆ ಹೋದರೂ ಅವರು ಏನನ್ನೂ ಕಿವಿಯ ಮೇಲೆ ಹಾಕಿಕೊಳ್ಳದೆ ಸ್ಕೂಲು ಬಿಟ್ಟು ಬರಬೇಡಿ ಹೋಗಿ! ಪಾಠ ಮಾಡಿ! ಎಂದು ಗದರಿಸಿ ಮೋಟಾರಿನಲ್ಲಿ ಹೊರಟೇ ಹೋದರು ಎಂದು ತಮ್ಮ ಅಳಲನ್ನು ರಂಗಣ್ಣನವರ ಮುಂದೆ ತೋಡಿಕೊಂಡರು. ಜುಲ್ಮಾನೆ ವಿಧಿಸಿದ್ದಕ್ಕಾಗಿ ತುಂಬಾ ನೊಂದು ಕೊಂಡರು. | |
| 61. | ಎಂಟು ಅಥವಾ ಹತ್ತು ವಾಕ್ಯಗಳ ಪದ್ಯದ ಪ್ರಶ್ನೆಗಳಿಗೆ ಉತ್ತರಗಳು. | 1 × 4 = 4 |
| | — ಯಕ್ಷ ಮತ್ತು ಧರ್ಮಜನ ನಡುವೆ ನಡೆದ ಸಂವಾದ | |
| | ವನವಾಸದ ಅಂತ್ಯದಲ್ಲಿ ದ್ವೈತವನದಲ್ಲಿದ್ದ ಪಾಂಡವರನ್ನು ಪರೀಕ್ಷಿಸಲು ಯಮನು ಯಕ್ಷನ ರೂಪದಲ್ಲಿ ಪ್ರತ್ಯಕ್ಷನಾಗುತ್ತಾನೆ. ಧರ್ಮಜನಿಗೂ ಯಕ್ಷನಿಗೂ ನಡೆದ ಸಂವಾದ ಹಲವು ಸಚ್ಚಾರಿತ್ರ್ಯ ಅಂಶಗಳನ್ನು ಒಳಗೊಂಡಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಯಕ್ಷನು ಪ್ರಾರಂಭದಲ್ಲಿ ಧರ್ಮಜನನ್ನು ಕುರಿತು ಹೀಗೆ ಪ್ರಶ್ನಿಸುತ್ತಾನೆ. ಸಮುದ್ರಕ್ಕೆ ಸಮಾನವಾದ ಸರೋವರ ಯಾವುದು ? ನೆಲಕ್ಕೆ ಹಿತವನ್ನು ಬಯಸುವವನು ಯಾರು ? ಮರ್ತ್ಯಾವಳಿಗೆ ಮಾತೆ ಯಾರು ? ಸೂರ್ಯಪ್ರಭೆಗೆ ಸರಿಯಾದುದು ಯಾವುದು ? ಕ್ಷತ್ರಿಯನು ಯಾರು ? ವಿಪ್ರರಲ್ಲಿ ಶ್ರೋತ್ರಿಯನು ಯಾರು ? ಸುಜನರಲ್ಲಿ ಮಹಾಪುರುಷನು ಯಾರು ? ಸುಧೀಮನು ಯಾರು ? ದೇವನಿಗೆ ಪ್ರಿಯನಾದವನು ಯಾರು ? ಕಠಿಣ ಕಷ್ಟಾಶ್ರಯನು ಯಾರು ? ನಿಂದ್ಯನಾರು ? ಮಂದ್ಯನಾರು ಜೀವವಿದ್ದು ಸತ್ತಂತಿರುವವನು ಯಾರು ? ದೇಶವು ಯಾರಿಂದ ನಾಶ ಹೊಂದುವುದು ? ನಡೆದ ಯಜ್ಞವು ಹೇಗೆ ಕೆಡುವುದು ? ನರಕಿ ಯಾರು, ಸುಜನರಲಿ ಬಾಹಿರನು ಯಾರು ? ಭೂಮಿಪಾಲರಲಿ ಜೀವವಿದ್ದು ಮೃತನಾದವನಂತಿರುವವನಾರು ? ಎಂದು ಪ್ರಶ್ನಿಸುತ್ತಾನೆ ಖಚರನ ಈ ಎಲ್ಲಾ ಪ್ರಶ್ನೆಗಳಿಗೂ ಕ್ರಮವಾಗಿ ನಗುನಗುತ್ತ ಧರ್ಮಜನು ಹೇಗೆ ಉತ್ತರಿಸುತ್ತಾನೆ ಸರೋವರ, ಶಕ್ರ, ಗೋವು, ಸತ್ಯ, ಧೃತಿಯುತ, ನಾಲ್ಕು ವೇದಗಳನ್ನು ಬಲ್ಲವನು, ಅಹಿಂಸಾರತನು, ಪರರಿಗುಪಕಾರಿ, ಪರರ ಗುಣದುನ್ನತಿಯ ಸೈರಿಸದವನು, ಪರ ನಿಂದಕನು, ಪರಹಿತನು ಹೇಳಿದಿಚ್ಛೆಗೆ ನಡೆಯುವ ಅರಸ, ದರಿದ್ರ ಸಾಲದೆನಿಸಿದ ದಕ್ಷಿಣೆ ಕೃಪಜ್ಞ, ವಿದ್ಯಾಧನ ಮದಾಂಧ, ಯುದ್ಧಭೂಮಿಗೆ ಹೋಗಿ ಹೆದರಿ ಓಡಿ ಬರುವವನು, ಗುರುವನ್ನು ಅರ್ಥಮಾಡಿಕೊಳ್ಳದವನು, ಅಂಗನೆಯರಲ್ಲಿ ವಿಶ್ವಾಸವಿಟ್ಟವನು ಎಂದು ಉತ್ತರಿಸುತ್ತಾನೆ ಧರ್ಮಜನ ಉತ್ತರದಿಂದ ಆನಂದಗೊಂಡ ಯಕ್ಷನು ತನ್ನ ನಿಜರೂಪವನ್ನು ತೋರುತ್ತಾನೆ. | |
| | — ಭರತ ಭೂಮಿಯ ವರಪುತ್ರನಾಗ ಬಯಸುವವನು ಬಾಳಬೇಕಾದುದು | |
| | ಸೇಡಿಯಾಪು ಕೃಷ್ಣಭಟ್ಟರು ಚಿಂತನಾಶೀಲ ಕವಿಗಳು. ಒಂದೇ ತಾಯಿಯ ಮಕ್ಕಳು ತಮ್ಮ ತಮ್ಮೊಳಗೆ ಹೊಡೆದಾಡಿಕೊಳ್ಳುವುದನ್ನು ಕಂಡ ಭಟ್ಟರು ಭಾರತಾಂಬೆಯ ಹಿರಿಮೆ ಗರಿಮೆ, ನಾಡು ನುಡಿಯ ಭವ್ಯತೆ ಕವಿ ಕೃತಿಗಳ ಶ್ರೇಷ್ಠತೆ ಪ್ರಾಕೃತಿಕ ಭಿನ್ನತೆಯನ್ನು ಅರಿತು ಭಾರತಮಾತೆಯ ಮಕ್ಕಳಾದ ನಾವು ಹೇಗೆ ಬೆಳೆದು ಬಾಳಬೇಕೆಂಬುದನ್ನು ಪ್ರಸ್ತುತ ಪದ್ಯದಲ್ಲಿ ಸಾರಿದ್ದಾರೆ. | |
| | ಭರತ ಭೂಮಿಯ ವರ ಪುತ್ರನು ಭಾರತದ ಭೌಗೋಳಿಕ ಹಿನ್ನೆಲೆಯನ್ನು ವೈಶಿಷ್ಟ್ಯತೆಯನ್ನು ಅರ್ಥಮಾಡಿಕೊಂಡು, ಆ ಸೇತು ಹಿಮಾಚಲ ಪರ್ಯಂತ ಭಾರತವನ್ನು ಒಪ್ಪಿಕೊಳ್ಳುತ್ತ ಇದು ಸಮಗ್ರ ಭಾರತವೆಂದು ತಿಳಿದು ಭಿನ್ನತೆಯನ್ನು ಮರೆತು ಸಕಲ ಭಾಗ್ಯಕ್ಕೂ ಸತ್ಪಾತ್ರನಾಗಿ ಬಾಳಬೇಕು. | |
| | ಭಾರತಮಾತೆಯು ಹಲವು ಭಾಷೆಗಳಿಂದ ಕೂಡಿ ಕಾಮನಬಿಲ್ಲಿನಂತೆ ಅವಳ ಕಾಂತಿ ತೋರುತ್ತದೆ. ಭಾರತದಲ್ಲಿನ ಎಲ್ಲಾ ಭಾಷೆಗಳನ್ನು ಕಲಿಯುತ್ತಾ ಆನಂದಿಸುತ್ತಾ, ಬೆಳೆಯುತ್ತಾ ಸಕಲ ಭಾಷೆಗಳೂ ಸುಪವಿತ್ರವೆಂದು ಭಾವಿಸಿ ಭಿನ್ನತೆ ತೋರದೆ ಬಾಳಬೇಕು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬೃಹತ್ ಭಾರತವೇ ಒಂದು ಬೋಧಿವೃಕ್ಷ, ಇಲ್ಲಿನ ಮಹಾಕವಿಗಳು ಬೋಧಿ ವೃಕ್ಷದ ಒಂದೊಂದು ಕೊಂಬೆಗಳು, ಅವರು ನೀಡಿದ ದರ್ಶನ ಕಾಣ್ಕೆ ಸಿದ್ಧಿಗಳು ನಿನ್ನ ಅಭಿವೃದ್ಧಿಗೆ ಪೂರಕ ಎಂಬುದನ್ನು ತಿಳಿದು ಪೂರ್ಣ ಪುಣ್ಯವಂತನಾಗಿ ಬೆಳೆದು ಬಾಳಬೇಕು. | |
| | ಆದಿಯ ಮಾನವರು ಈ ಭೂಮಿಯನ್ನು ತಾಯಿಯೆಂದು ಭಾವಿಸಿದ್ದರು ಆರ್ಯರು ಮತ್ತು ದ್ರಾವಿಡರು ಭಾರತಾಂಬೆಯ ಎದೆ ಹಾಲುಂಡು ಬೆಳೆದಿದ್ದಾರೆ ಪ್ರಸ್ತುತ ಆರ್ಯ ದ್ರಾವಿಡರೆಂದು ಭೇದವೆಣಿಸಿ ಚಳುವಳಿ ಮಾಡದೆ, ಗದ್ದಲ ಮಾಡದೆ ಘನ ಗಂಟೆಯಂತೆ ಸ್ನೇಹಭಾವದಿಂದ ಬೆಳೆದು ಬಾಳಬೇಕು ನೀನು ಮನುಷ್ಯಕುಲದ ಸುಪುತ್ರನಾಗಬೇಕು, ಅಖಿಲ ಜಗತ್ತಿನ ಮಿತ್ರನಾಗಿ ಬಾಳಬೇಕು. | |
| | ಜಗತ್ತನ್ನು ಬೇರೆಯವರ ದೃಷ್ಟಿಯಲ್ಲಿ ನೋಡುವುದನ್ನು ಬಿಟ್ಟು, ನಿನ್ನ ವಿವೇಚನೆಯನುಸಾರ ನೋಡಬೇಕು. ಹೃದಯ ಕಮಲದಲ್ಲಿ ಶಾರದೆಯನ್ನು ಭಜಿಸಿ ಜ್ಞಾನ ಪಡೆದು ಲೌಕಿಕ ಬದುಕಿನ ಅನುಭವಗಳನ್ನು ಹೊಸಗನ್ನಡ ಸಾಹಿತ್ಯ ಮೂಲಕ ಅರಿಯುತ್ತಾ, ಭಯವನ್ನುಂಟುಮಾಡುವ ಅಜ್ಞಾನವನ್ನು ಹೊರತೆಗೆಯುತ್ತಾ ಸತ್ಯವೀರ ಪುತ್ರನಾಗಿ, ಮಾನುಷ್ಯ ಪಥದ ನೇತ್ರನಾಗಿ, ಭಾವಿ ಯುಗದ ಧಾತ್ರನಾಗಿ ಬೆಳೆದು ಬಾಳಬೇಕೆಂದು ಹೇಳಿದ್ದಾರೆ. | |
| 62. | ಪತ್ರಲೇಖನ ಬರೆಯುವುದು : | $1 \times 5 = 5$ |
| | ಇಂದ, ವಿಳಾಸ, ದಿನಾಂಕ<br>ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿ, ಮುಕ್ತಾಯ<br>ಹೊರ ವಿಳಾಸ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| 63. | ಪ್ರಬಂಧ ಲೇಖನ ಬರೆಯುವುದು : | $1 \times 5 = 5$ |
| | ಪೀಠಿಕೆ | 1 ಅಂಕ |
| | ವಿಷಯದ ಬೆಳವಣಿಗೆ | 2 ಅಂಕಗಳು |
| | ಮುಕ್ತಾಯ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |